ಕಬಿನಿ ಜಲಾಶಯ

367 (742) ಶ್ರೀ ಚಿಕ್ಕಣ್ಣ (ಹೆಚ್.ಡಿ. ಕೋಟೆ) :- ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕು ಬೀಚನಹಳ್ಳಿ ಕಬಿನಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಿ ವಶಪಡಿಸಿಕೊಂಡ ಒಟ್ಟು ಜಮೀನು ಎಷ್ಟು;

ಆ) ಈ ಮುಳುಗಡೆ ಪ್ರದೇಶದಲ್ಲಿ ಸರ್ಕಾರದಿಂದ ವಶಪಡಿಸಿಕೊಂಡ ನಂತರ ಜಮೀನಿಗೆ ವಿತರಿಸಿದ ಪರಿಹಾರ ಎಷ್ಟು;

ಇ) ಮುಳುಗಡೆ ಪ್ರದೇಶವನ್ನು ವಶಪಡಿಸಿಕೊಂಡ ನಂತರ ಈ ಜಮೀನು ಪ್ರಸ್ತುತ ಯಾರ ವಶದಲ್ಲಿದೆ;

ಈ) ಮುಳುಗಡೆಯಾದ ಜಮೀನಿನಲ್ಲಿ ರೆಸಾರ್ಟ್‌ಗಳನ್ನು ನಡೆಸುತ್ತಿರುವವರ ವಶದಲ್ಲಿ ಎಷ್ಟೆಷ್ಟು ಜಮೀನಿದೆ? (ಮಾಹಿತಿ ನೀಡುವುದು)

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :-

ಅ) ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕು ಬೀಚನಹಳ್ಳಿ ಗ್ರಾಮದ ಬಳಿ ಕಬಿನಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಒಟ್ಟು 6233 ಹೆಕ್ಟೇರ್ ಪ್ರದೇಶವನ್ನು ವಶಪಡಿಸಿಕೊಳ್ಳಲಾಗಿದೆ.

ಆ) ಈ ಮುಳುಗಡೆ ಪ್ರದೇಶದಲ್ಲಿ ಸರ್ಕಾರದಿಂದ ವಶಪಡಿಸಿಕೊಂಡು ಪರಿಹಾರ ವಿತರಿಸಿದ ಜಮೀನಿಗೆ ಕಂದಾಯ ಇಲಾಖೆಯಿಂದ ರೂ. 872.00 ಲಕ್ಷ ಪರಿಹಾರದ ವಿತರಿಸಿದೆ.

ಇ) ಮುಳುಗಡೆ ಪ್ರದೇಶವನ್ನು ವಶಪಡಿಸಿಕೊಂಡ ನಂತರ ಈ ಜಮೀನು ಪ್ರಸ್ತುತ ಕಾವೇರಿ ನೀರಾವರಿ ನಿಗಮ ನಿಯಮಿತದ ವಶದಲ್ಲಿದೆ.

ಈ) ಮುಳುಗಡೆಯಾದ ಜಮೀನಿನಲ್ಲಿ ಯಾರೂ ರೆಸಾರ್ಟ್‌ಗಳನ್ನು ನಡೆಸುತ್ತಿರುವುದಿಲ್ಲ.

ಹೆಚ್.ಡಿ. ಕೋಟೆ ಅರಣ್ಯ ಪ್ರದೇಶ

368 (743) ಶ್ರೀ ಚಿಕ್ಕಣ್ಣ (ಹೆಚ್.ಡಿ.ಕೋಟೆ) :- ಮಾನ್ಯ ಅರಣ್ಯ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಹೆಚ್.ಡಿ. ಕೋಟೆ ತಾಲ್ಲೂಕಿನ ಬಹುಭಾಗ ಅರಣ್ಯ ಪ್ರದೇಶದಿಂದ ಕೂಡಿದ್ದು, ಇದರಲ್ಲಿ ಡಿ.ಬಿ. ಕುಪ್ಪೆ, ಮೊಳೆಯೂರು, ಸುಂಕದಕಟ್ಟೆ, ಹೆಡಿಯಾಲ, ನುಗು–ಬೀರ್ವಾಳು, ಸರಗೂರು, ಹೆಚ್.ಡಿ.ಕೋಟೆ ಹುಲಿ ಯೋಜನೆ, ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನಗಳಲ್ಲಿ 2008 ರಿಂದ ಈವರೆಗೆ ಕೈಗೊಂಡಿರುವ ಇ.ಪಿ.ಟಿ (ಆನೆ ತಡೆ ರಕ್ಷಣಾ ಗುಂಡಿ) ಕಾರ್ಯದ ಉದ್ದವೆಷ್ಟು; ನಿಗದಿಯಾದ ಅನುದಾನವೆಷ್ಟು?

ಆ) ಈ ಆನೆ ತಡೆ ಗುಂಡಿಯ ಕಾಮಗಾರಿ ಸರಿಯಾಗಿದೆಯೆಂದು ಪರಿಶೀಲಿಸಿ ಧೃಡೀಕರಿಸಿದವರು ಯಾರು?

ಇ) ಇಲ್ಲಿಯವರೆಗೆ ಕೈಗೊಂಡಿರುವ ಕಾಮಗಾರಿಗೆ ಪಾವತಿಸಲಾದ ಬಿಲ್ಲಿನ ಮೊತ್ತವೆಷ್ಟು?

ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು) :–

ಅ) **1. ಬಂಡೀಪುರ ಹುಲಿಯೋಜನೆ ವಿಭಾಗ**

ಬಂಡೀಪುರ ವಿಭಾಗದ ವ್ಯಾಪ್ತಿಗೆ ಮೊಳೆಯೂರು, ಹೆಡಿಯಾಲ ವಲಯಗಳು ಸೇರಿದ್ದು, ಈ ವ್ಯಾಪ್ತಿಯಲ್ಲಿ 2008 ರಿಂದ ಈ ವರೆವಿಗೆ ಕೈಗೊಂಡಿರುವ ಆನೆ ತಡೆ ಕಂದಕದ ವಿಸ್ತೀರ್ಣ ಮತ್ತು ನಿಗಧಿಯಾದ ಅನುದಾನದ (ವೆಚ್ಚ) ವಿವರ ಕೆಳಕಂಡಂತಿದೆ.

ಅ) 2008–09ನೇ ಮತ್ತು 2010–11ನೇ ಸಾಲಿನಲ್ಲಿ ಯಾವುದೇ ನಿಗಧಿಯ ಕಾರ್ಯಕ್ರಮ ಹಾಗೂ ವೆಚ್ಚ ಭರಿಸಿರುವುದಿಲ್ಲ.

ಆ) 2009–10ನೇ ಹಾಗೂ ಸಾಲಿನಲ್ಲಿ 2.5 ಕಿ.ಮೀ. ಆನೆ ತಡೆ ಕಂದಕದ ಕಾರ್ಯಕ್ರಮ ಹಮ್ಮಿಕೊಂಡು ರೂ. 4.16 ಲಕ್ಷ ವೆಚ್ಚ ಭರಿಸಲಾಗದೆ.

ಇ) 2011–12ನೇ ಸಾಲಿನಲ್ಲಿ ಮೊಳೆಯೂರು ವಲಯದಲ್ಲಿ 2.50 ಕಿ.ಮೀ. ಆನೆ ತಡೆ ಕಂದಕ ಕಾಮಗಾರಿ ಕೈಗೊಳ್ಳಲು ಟೆಂಡರ್ ಕರೆದು ಕಾಮಗಾರಿ ಪ್ರಗತಿಯಲ್ಲಿದ್ದು ಇದಕ್ಕಾಗಿ ರೂ. 7.50 ಲಕ್ಷ ಅನುದಾನ ನಿಗದಿಯಾಗಿದ್ದು ಈವರೆವಿಗೆ ವೆಚ್ಚ ಭರಿಸಿರುವುದಿಲ್ಲ.

2. ಮೈಸೂರು ವನ್ಯಜೀವಿ ವಿಭಾಗ, ಮೈಸೂರು

ಹೆಚ್.ಡಿ.ಕೋಟೆ ತಾಲ್ಲೂಕಿನ ವ್ಯಾಪ್ತಿಗೆ ಒಳಪಡುವ ನುಗು–ಬೀರ್ವಾಳು ವನ್ಯಧಾಮ ಹುಲಿಯೋಜನೆ ವ್ಯಾಪ್ತಿಯಲ್ಲಿದ್ದು ಸದರಿ ವನ್ಯಧಾಮದ 25 ಕಿ.ಮೀ. ಉದ್ದದ ಆನೆ ತಡೆ ಕಂದಕಗಳನ್ನು 2008 ಕ್ಕಿಂತ ಮೊದಲೇ ನಿರ್ಮಿಸಿರುತ್ತಾರೆ.

3. ಹುಣಸೂರು ವನ್ಯಜೀವಿ ವಿಭಾಗ, ಹುಣಸೂರು

ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನದ ಹೆಚ್.ಡಿ.ಕೋಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಮೇಟಿಕುಪ್ಪೆ, ಅಂತರಸಂತೆ ಮತ್ತು ಡಿ.ಬಿ.ಕುಪ್ಪೆ ವಲಯಗಳು ಬರುತ್ತಿದ್ದು, ಆನೆ ತಡೆ ಗುಂಡಿ ದುರಸ್ಥಿ ಮಾತ್ರ ಕೈಗೊಳ್ಳಲಾಗಿದೆ. ಅಂತರಸಂತೆ ವಲಯದಲ್ಲಿ 2008–09ನೇ ಸಾಲಿನಲ್ಲಿ 5.5 ಕಿ.ಮೀ. ಆನೆ ತಡೆ ಗುಂಡಿ ದುರಸ್ಥಿ ಕಾರ್ಯ ಕೈಗೊಂಡಿದ್ದು. ಇದಕ್ಕಾಗಿ ರೂ. 1.42 ಲಕ್ಷ ವೆಚ್ಚ ಭರಿಸಲಾಗಿದೆ. ಮೇಟಿಕುಪ್ಪೆ ವಲಯದಲ್ಲಿ 7.5 ಕಿ.ಮೀ. ಆನೆ ತಡೆ ಗುಂಡಿ ದುರಸ್ಥಿ ಕಾರ್ಯಕ್ಕೆ 1.78 ಲಕ್ಷ ವೆಚ್ಚ ಭರಿಸಲಾಗಿದೆ. ಮೇಟಿಕುಪ್ಪೆ ವಲಯದಲ್ಲಿ 2009–10ನೇ ಸಾಲಿನಲ್ಲಿ 10 ಕಿ.ಮೀ. ದುರಸ್ಥಿ ಕಾರ್ಯಕ್ಕೆ ರೂ. 1.79 ಲಕ್ಷ ಹಾಗೂ 2010–11ನೇ ಸಾಲಿನಲ್ಲಿ 1 ಕಿ.ಮೀ. ದುರಸ್ಥಿ ಕಾರ್ಯಕ್ಕೆ ರೂ. 1.00 ಲಕ್ಷ ವೆಚ್ಚ ಭರಿಸಲಾಗಿದೆ. 2011–12ನೇ ಸಾಲಿನ ನವೆಂಬರ್ ವರೆಗೆ 1.90 ಕಿ.ಮೀ. ದುರಸ್ಥಿ ಕಾರ್ಯಕ್ಕೆ ರೂ. 3.15 ಲಕ್ಷ ವೆಚ್ಚ ಭರಿಸಲಾಗಿದೆ.

ಆ) 1. ಬಂಡೀಪುರ ಹುಲಿಯೋಜನೆ ವಿಭಾಗದ ಆನೆ ತಡೆ ಗುಂಡಿ ಕಾಮಗಾರಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಹೆಡಿಯಾಲ ಉಪ–ವಿಭಾಗ ರವರು ಅಳವು ಮಾಪನ (Check Measurement) ಮಾಡಿ ಧೃಡೀಕರಿಸಿರುತ್ತಾರೆ.

2. ಮೈಸೂರು ವನ್ಯಜೀವಿ ವಿಭಾಗದ ಕಾಮಗಾರಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪರಿಶೀಲನೆ ಮಾಡಿರುತ್ತಾರೆ.

3, ಹುಣಸೂರು ವನ್ಯಜೀವಿ ವಿಭಾಗದ ಆನೆ ತಡೆ ಗುಂಡಿ ದುರಸ್ಥಿ ಕಾರ್ಯವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಮೇಟಿಕುಪ್ಪೆ ವನ್ಯಜೀವಿ ಉಪ–ವಿಭಾಗ, ಅಂತರಸಂತೆ ಇವರು ಪರಿಶೀಲಿಸಿ ಧೃಡೀಕರಿಸಿರುತ್ತಾರೆ.

ಇ) 1. ಬಂಡೀಪುರ ವಿಭಾಗದ ಮೊಳಿಯೂರು ವಲಯದಲ್ಲಿ 2009–10ನೇ ಸಾಲಿನಲ್ಲಿ 2 ಕಿ.ಮೀ. ಆನೆ ತಡೆ ಕಂದಕ ಕಾಮಗಾರಿ ಕೈಗೊಂಡಿದ್ದು, ರೂ. 2.67 ಲಕ್ಷ ಪಾವತಿಯಾಗಿರುತ್ತದೆ.

2, ಮೈಸೂರು ವನ್ಯಜೀವಿ ವಿಭಾಗದಲ್ಲಿ 2008ರ ನಂತರ ಹೊಸದಾಗಿ ಆನೆ ತಡೆ ಕಂದಕ ನಿರ್ಮಿಸದೆ ಇರುವುದರಿಂದ ಹಣ ಪಾವತಿಸಿರುವುದಿಲ್ಲ.

3. ಹುಣಸೂರು ವನ್ಯಜೀವಿ ವಿಭಾಗದ ಅಂತರಸಂತೆ ವಲಯದಲ್ಲಿ 2008–09ನೇ ಸಾಲಿನಲ್ಲಿ 5.5 ಕಿ.ಮೀ. ಆನೆ ತಡೆ ಗುಂಡಿ ದುರಸ್ಥಿ ಕಾರ್ಯಕ್ಕೆ ರೂ. 1.42 ಲಕ್ಷ

ಪಾವತಿಸಲಾಗಿದೆ. ಮೇಟಿಕುಪ್ಪೆ ವಲಯದಲ್ಲಿ 7.5 ಕಿ.ಮೀ. ಆನೆ ತಡೆ ಗುಂಡಿ ದುರಸ್ಥಿ ಕಾರ್ಯಕ್ಕೆ 1.78 ಲಕ್ಷ ಪಾವತಿಸಲಾಗಿದೆ. ಅಂತೆಯೇ ಮೇಟಿಕುಪ್ಪೆ ವಲಯದಲ್ಲಿ 2009–10ನೇ ಸಾಲಿನಲ್ಲಿ 10 ಕಿ.ಮೀ. ದುರಸ್ಥಿ ಕಾರ್ಯಕ್ಕೆ ರೂ. 1.79 ಲಕ್ಷ ಹಾಗೂ 2010–11ನೇ ಸಾಲಿನಲ್ಲಿ 1 ಕಿ.ಮೀ. ದುರಸ್ಥಿ ಕಾರ್ಯಕ್ಕೆ ರೂ. 1.00 ಲಕ್ಷ ಪಾವತಿಸಲಾಗಿದೆ. 2011–12ನೇ ಸಾಲಿನ ನವೆಂಬರ್ 2011ರ ಅಂತ್ಯದವರೆಗೆ 1.90 ಕಿ.ಮೀ. ದುರಸ್ಥಿ ಕಾರ್ಯಕ್ಕೆ ರೂ. 3.15 ಲಕ್ಷ ಪಾವತಿಸಲಾಗಿದೆ.

K.I.A.D.B. ವತಿಯಿಂದ ಭೂ ಸ್ವಾದೀನ

369 (744) ಶ್ರೀ ಚಿಕ್ಕಣ್ಣ (ಹೆಚ್.ಡಿ. ಕೋಟೆ) :– ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಆಲನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಹಳ್ಳದ ಮನುಗನಹಳ್ಳಿ ಗ್ರಾಮದ ಸರ್ವೆ ನಂಬರ್‌ಗಳಲ್ಲಿ ಸುಮಾರು 1000 ಎಕರೆ ಕೃಷಿ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮಂಜೂರು ಮಾಡಲು ಜಮೀನಿನ ಮಾಲೀಕರಿಗೆ ನೋಟೀಸ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಜಮೀನು ಕೃಷಿ ಬೆಳೆಗೆ ಅತ್ಯಂತ ಉಪಯುಕ್ತವಾದ ಮಣ್ಣಿನಿಂದ ಕೂಡಿದ್ದು, ರೈತರ ವಿರೋಧದ ನಡುವೆಯೂ ಈ ಜಮೀನು ವಶಪಡಿಸಿಕೊಳ್ಳಲು ನೋಟೀಸ್ ನೀಡಿರುವುದು ನ್ಯಾಯವೇ;

ಇ) ಮೇಲ್ಕಂಡ ಕೃಷಿ ಜಮೀನನ್ನು ಕೆ.ಐ.ಎ.ಡಿ.ಬಿ. ಗೆ ನೀಡುವ ಉದ್ದೇಶವನ್ನು ಕೈಬಿಡಲು ಹಾಗೂ ರೈತರ ಹಿತ ಕಾಪಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :–

ಅ) ಹೌದು.

ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕಿನ ಹಳ್ಳದಮನುಗನಹಳ್ಳಿ ಗ್ರಾಮದ 990 ಎಕರೆ 08 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ಕಲಂ 3(1), 1(3) ಮತ್ತು 28(1) ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಈ ಜಮೀನಿನ ಮಾಲೀಕರಿಗೆ ಕಲಂ 28(2)ರಡಿ ನೋಟೀಸ್ ನೀಡಲಾಗಿದೆ.